ಸಿ.ಸಿ. ನಂ.16/2024 ಪಿ. ಡಬ್ಲ್ಯೂ: 1

ಶಿಲ್ಪಾ ಗಂಡ ರಾಮಪ್ಪ ಕಂಪಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03-06-2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.RSD ಆರೋಪಿ ಪರ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ದೂರಿನಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡಿದ್ದೇನೆ. ಬಸಪ್ಪ ನನ್ನ ಮಾವ ಆತನು ದಿಃ05-12-2025 ರಂದು ತೀರಿಕೊಂಡಿದ್ದಾನೆ. ದೂರು ಕೊಡುವ ಕಾಲಕ್ಕೆ ನನ್ನ ಮಾವ ಜೀವಂತ ಇದ್ದ. ನನ್ನ ಅತ್ತೆ ನಿಂಗಮ್ಮ ಜೀವಂತ ಇದ್ದಾಳೆ. 3 ದಿನಗಳ ಕಾಲ ಘಟನೇ ನಡೆದಿರುತ್ತದೆ. ಹಿರಿಯರು ಕೂಡಿ ಪಂಚಾಯತಿ ಮಾಡುತ್ತಿವಿ ಎಂದು ಹೇಳಿದ್ದರು ಆದ್ದರಿಂದ ನಾನು ದೂರನ್ನು ತಡವಾಗಿ ನೀಡಿರುತ್ತೇನೆ. ಊರಿನ ಹಿರಿಯರು ದೂರು ಕೊಡಬೇಕ ನೀನಗೂ ಮತ್ತು ಆರೋಪಿತನಿಗೂ ಮತ್ತು ಅವನ ಮನೆಯವರಿಗೂ ಬುದ್ದಿವಾದ ಹೇಳುತ್ತೇವೆ ಎಂದು ಹೇಳಿದ್ದರು. 2 ನೇ ಆರೋಪಿ ಹಳೆ ಮನೆಯಲ್ಲಿ ವಾಸವಿದ್ದ ಎಂದರೆ ಸಾಕ್ಷಿಯು ಪ್ಲಾಟನಲ್ಲಿ ಹೊಸ ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಇನ್ನೂಳಿದ 3 ರಿಂದ 13 ನೇ ಆರೋಪಿತರು ಬೇರೆ ಬೇರೆ ವಾಸವಿರುತ್ತಾರೆ ಎಂದರೆ ಸರಿ. 13 ನೇ ಆರೋಪಿ ಲಕ್ಕಲಕಟ್ಟೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ರಾತ್ರಿ 12.00 ಗಂಟೆ ಸುಮಾರಿಗೆ ನನ್ನ ಗಂಡನ ಅಣ್ಣ ಯಲ್ಲಪ್ಪ 2 ನೇ ಆರೋಪಿ ನನ್ನ ಜೊತೆ ಅಸಭ್ಯವಾಗಿ ವರ್ತಿಸಿದ್ದರು. ದೂರಿನಲ್ಲಿ ರಾತ್ರಿ 08.00 ಗಂಟೆಗೆ ಘಟನೆಯಾಗಿತ್ತು ಎಂದು ಹೇಳಿ ಬರೆಸಿಲ್ಲ. ಘಟನೆಯಾದ ದಿನ ಮನೆಯಲ್ಲಿ ಯಾರು ಇರಲಿಲ್ಲ. ಘಟನೆ ನಡೆದ ದಿನ ಆಜುಬಾಜು ಮನೆಗಳಲ್ಲಿ ವಾಸವಿದ್ದರೂ ಎಂದರೆ ಸರಿ. ಘಟನೆಯಾದಾಗ ನಾನು ಕಿರುಚಾಡಿ ಹೀಗೆ ಏಕೆ ಮಾಡಿದ್ದಿರಿ ಮಾವ ಎಂದು ನಾನು ಹೊರಗಡೆ ಬಂದಿರುತ್ತೇನೆ. ನೆರೆಹೊರೆಯವರು ಬಂದಿರುವುದಿಲ್ಲ. ಘಟನೆಯಾದ ನಂತರ ಬೆಳಿಗ್ಗೆ ಸದರಿ ವಿಷಯವನ್ನು ನೆರೆಹೊರೆಯವರಿಗೆ ಹೇಳಿರುವುದಿಲ್ಲ. ಘಟನೆಯಾದ ಮರುದಿನ ನನ್ನ ಗಂಡ 1 ನೇ ಆರೋಪಿ ರಾತ್ರಿ 08.00 ಗಂಟೆಗೆ ಮನೆಗೆ ಬಂದಿರುತ್ತಾನೆ. ಘಟನೆಯ ಬಗ್ಗೆ ನಾನು ನನ್ನ ಗಂಡನಿಗೆ ತಿಳಿಸಿದಾಗ ಒಮ್ಮೆಲೆ ಆತನು ನನಗೆ ಹೊಡಿ-ಬಡಿ ಮಾಡಲು ಬಂದಿರುತ್ತಾನೆ. ನನ್ನ ಗಂಡ ಅವರ ಅಣ್ಣನಾದ 2 ನೇ ಆರೋಪಿತನನ್ನು ಕರೆಯಿಸಿ ವಿಚಾರಿಸಿಲ್ಲ. ನನ್ನ ಗಂಡ ಬಂದ ದಿನ ಕಟ್ಟಿಗೆಯಿಂದ ನನಗೆ ಸುನಿಲ್, ಬಸವರಾಜ, ವೆಂಕಟೇಶ ಮತ್ತು ಮಲ್ಲಿಕಾರ್ಜುನ ಇವರೆಲ್ಲರೂ ಸೇರಿ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಸುನಿಲ್ ಮತ್ತು ಮಲ್ಲಿಕಾರ್ಜುನ ಕಟ್ಟಿಗೆತೆಗೆದುಕೊಂಡು ಕೈಗೆ, ಬುಜಕ್ಕೆ ಹೊಡೆದಾಗ ಒಳಪೇಟ್ಟಾಗಿತ್ತು. ಆ ದಿನ ರಾತ್ರಿ ಅಲ್ಲಿಯೇ ಇದ್ದೆ. ದಿಃ 08-06-2023 ರಂದು ಬೆಳಿಗ್ಗೆ 07.00 ಗಂಟೆ ಸುಮಾರಿಗೆ ನನ್ನ ತಂದೆ-ತಾಯಿಗೆ ಫೋನ ಮಾಡಿ ವಿಷಯ ತಿಳಿಸಿರುತ್ತೇನೆ. ನನ್ನ ಗಂಡ ನನ್ನ ವಿರುದ್ದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಡೆದಿದೆ ಎನ್ನಲಾದ ಘಟನೇಯ ಪೂರ್ವದಲ್ಲಿ ವಿವಾಹ ವಿಚ್ಛೆದನ ಕೋರಿ ಅರ್ಜಿ ಸಲ್ಲಿಸಿದ್ದ ಎಂದರೆ ಸರಿ. ಅದು ಇನ್ನೂ ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ. ನಾನು ಸದರಿ

ಪ್ರಕರಣದಲ್ಲಿ ಹಾಜರಾಗಿ ಯಾವ ಕಾರಣಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾನೆ ಎಂದು ಓದಿ ತಿಳಿದುಕೊಂಡಿರುತ್ತೇನೆ. ನಾನು ಬೇಕಾಗಿಲ್ಲ ಎಂದು ಅವರ ಮನೆಯವರ ಮಾತು ಕೇಳಿ ಅರ್ಜಿ ಸಲ್ಲಿಸಿರುತ್ತಾನೆ. ನನ್ನ ತಂದೆ-ತಾಯಿ ಮದುವೆ ಕಾಲಕ್ಕೆ 5 ತೊಲೆ ಬಂಗಾರ, ರೂ.2 ಲಕ್ಷ ವರದಕ್ಷಿಣೆ, 2 ಲಕ್ಷ ರೂಪಾಯಿ ಮೌಲ್ಯದ ಬಾಂಡೆ ಸಾಮಾನನ್ನು 1ನೇ ಆರೋಪಿಗೆ ಕೊಟ್ಟಿರುತ್ತಾರೆ. ಸದರಿ ಎಲ್ಲಾ ಸಂಗತಿಯನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿರುತ್ತೇನೆ.

2. ಪೊಲೀಸರಿಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಲು ಸ್ಥಳವನ್ನು ನಾನೇ ತೋರಿಸಿರುತ್ತೇನೆ. ನನ್ನ ಸಮಕ್ಷಮ ಪಂಚನಾಮೆ ಬರೆದುಕೊಂಡಿರುತ್ತಾರೆ. ನನ್ನ ತಂದೆ ಹೆಸರು ಶರಣಪ್ಪ ಇರುತ್ತದೆ. ಕಾಲಕಾಲೇಶ್ವರ ವಾಸಿಗಳನ್ನು ಹೊರತುಪಡಿಸಿ ಬೇರೆ ಯಾರು ಸಾಕ್ಷಿದಾರರು ಈ ಪ್ರಕರಣದಲ್ಲಿ ಇರುವುದಿಲ್ಲ. ಹಡಗಲಿಯವರು ಸಾಕ್ಷಿ ಹೇಳಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಯು ಮುಂದುವರೆದು ಹಡಗಲಿ ಗ್ರಾಮದ ಶರಣಪ್ಪ ಮೇಟಿರವರು ಸಾಕ್ಷಿದಾರರಾಗಿ ಇರುತ್ತಾರೆ ಎಂದು ನುಡಿಯುತ್ತಾರೆ. ಮದುವೆಯಾದ ಒಂದು ವರ್ಷಗಳ ಕಾಲ ಹಡಗಲಿಯಲ್ಲಿ ನಾನು ಚನ್ನಾಗಿ ಇದ್ದೆ. ನನ್ನ ಗಂಡ ಮತ್ತು ಅವರ ಮನೆಯವರು 1 ವರ್ಷ ನನ್ನನ್ನು ಚನ್ನಾಗಿ ನೋಡಿಕೊಂಡಿರುತ್ತಾನೆ. ನಂತರ ನಾನು ಮತ್ತು ನನ್ನ ಗಂಡ ಗಿಣಿಗೇರಿಯಲ್ಲಿ ಇದ್ದೇವು. ಅಲ್ಲಿ 4 ವರ್ಷಗಳ ಕಾಲ ಚನ್ನಾಗಿ ಇದ್ದೇವು. ಗಿಣಿಗೇರಿಯಲ್ಲಿ ಇದ್ದಾಗ ನನ್ನ ಗಂಡ ವರದಕ್ಷಿಣೆಯನ್ನು ತೆಗೆದುಕೊಂಡುಬಾ ಎಂದು ಕಿರುಕುಳ ನೀಡಿರುತ್ತಾನೆ. ನನ್ನ ದೂರಿನಲ್ಲಿ ನನ್ನ ಗಂಡ ವರದಕ್ಷಿಣೆಯನ್ನು ತೆಗೆದುಕೊಂಡುಬಾ ಎಂದು ಕಿರುಕುಳ ನೀಡಿರುತ್ತಾನೆ ಎಂದು ಹೇಳಿ ಬರೆಸಿರುತ್ತೇನೆ. ದಿಃ 07-06-2023 ರಂದು ನನ್ನ ಗಂಡ ಒಮ್ಮೆಲೆ ನನಗೆ ಹೊಡಿ-ಬಡಿ ಮಾಡಿ ರೂ.2 ಲಕ್ಷ ವರದಕ್ಷಿಣೆ ಮತ್ತು ಕಾರು ತೆಗೆದುಕೊಂಡು ಬಾ ಎಂದು ಕೇಳಿರುತ್ತಾನೆ. ಅದೇ ದಿನ ನನಗೆ ನನ್ನ ಮೇಲೆ ಪೆಟ್ರೋಲ ಸುರಿದು ಬೆಂಕಿ ಹಚ್ಚುತ್ತೇನೆ ಎಂದು ಬೇದರಿಕೆ ಹಾಕಿರುತ್ತಾನೆ. ಗಿಣಿಗೇರಿಯಲ್ಲಿ ನಾನು ನನ್ನ ಗಂಡ ಇದ್ದಾಗ ನನ್ನ ಗಂಡ ನನಗೆ ಯಾವುದೇ ದಮಕಿ ಕೊಟ್ಟಿಲ್ಲ, ಚಿತ್ರಹಿಂಸೆ ನೀಡಿಲ್ಲ. ನನ್ನ ಮಾವ ಮತ್ತು ಅತ್ತೆ ನನಗೆ ವರದಕ್ಷಿಣೆ ಬಗ್ಗೆ ಕೇಳಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡನಿಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನ ಊರಿನಲ್ಲಿ ಸರಕಾರಿ ಆಸ್ಪತ್ರೆ ಇರುವುದಿಲ್ಲ. ಖಾಸಗಿ ಕ್ಲಿನಿಕಗಳು ಇರುತ್ತವೆ. ಹಡಗಲಿಯಲ್ಲಿ ನಾನು ತೋರಿಸಿಕೊಂಡಿರುತ್ತೇನೆ. ಹಡಗಲಿಯಲ್ಲಿ ನಾನು ಚಿಕಿತ್ಸೆ ಪಡೆದ ಬಗ್ಗೆ ಪೊಲೀಸರಿಗೆ ದಾಖಲಾತಿ ಕೊಟ್ಟಿಲ್ಲ. ದಿಃ 08-06-2023ರ ನಂತರ ಕಾಲಕಾಲೇಶ್ವರದಲ್ಲಿ ತೋರಿಸಿಕೊಂಡಿರುತ್ತೇನೆ. ಅಲ್ಲಿ ವೈದ್ಯರು ಚೀಟಿ ಕೊಟ್ಟಿದ್ದು, ಅದನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. 13 ನೇ ಆರೋಪಿ ದಿಃ08-06-2023 ರಂದು ಬೆಳಿಗ್ಗೆ 07.00 ಗಂಟೆ ಸುಮಾರಿಗೆ ನನಗೆ ಬಡೆದು ನೀನೇನಾದರೂ ದೂರು ನೀಡಿದರೆ ನಿಮ್ಮ ಕುಟುಂಬವನ್ನು ಪೆಟ್ರೋಲ ಹಾಕಿ ಸುಡುತ್ತೇನೆ ಮತ್ತು ನೀನು ಸತ್ತ ಮೇಲೆ ನಿನ್ನ ಗಂಡನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಕಪಾಳಕ್ಕೆ ಹೊಡೆದಿರುತ್ತಾನೆ. ನಾನು ವೈದ್ಯರ ಬಳಿ ಚಿಕಿತ್ಸೆ ಪಡೆಯುವಾಗ ಯಾರು ಹೊಡೆದರು ಎಂದು ನಾನು ಹೇಳಿಲ್ಲ. ವೈದ್ಯರು ನನಗೆ ಯಾರು ಹೊಡೆದರು ಎಂದು

ಕೇಳಿಲ್ಲ. ನನ್ನ ಗರ್ಭಕೋಶದ ಖಾಯಿಲೆ ಕುರಿತು ದಾವಾಖನೆಯ ಖರ್ಚನ್ನು ನನ್ನ ತಂದೆ-ತಾಯಿ ಬರಿಸಿರುತ್ತಾರೆ. ದಿಃ 06-06-2023 ಮತ್ತು 07-06-2023 ರಂದು ಹೊರತುಪಡಿಸಿ ಬೇರೆ ದಿನ ಘಟನೆ ನಡೆದಿಲ್ಲ ಎಂದರೆ ಸಾಕ್ಷಿಯು ಆಗಿರುತ್ತದೆ ಎಂದು ನುಡಿಯುತ್ತಾರೆ.

3. ನನ್ನ ಗಂಡ ವರದಕ್ಷಿಣೆ ಕೇಳಿದಾಗ ನನ್ನ ತಂದೆ-ತಾಯಿ ಈಗಾಲೇ ಸಾಲ ಮಾಡಿ ವರದಕ್ಷಿಣೆ ಕೊಟ್ಟಿದ್ದು ಈಗ ಕೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ನಮ್ಮ ಮನೆಗೆ ಅಳೆತನಕ್ಕೆ ಬಂದಾಗ ಬಟ್ಟೆ , ಬೈಕ ತೆಗೆದುಕೊಳ್ಳಲು 70 ಸಾವಿರ ಹಣ ಮತ್ತು ನಾಲ್ಕಾಣೆ ತುಕದ ಬಂಗಾರ ವನ್ನು ನನ್ನ ತಂದೆ-ತಾಯಿ ನನ್ನ ಗಂಡನಿಗೆ ಕೊಟ್ಟಿರುತ್ತಾರೆ. ಸದರಿ ವಿಷಯವನ್ನು ನನ್ನ ದೂರಿನಲ್ಲಿ ಮತ್ತು ಮರು ಹೇಳಿಕೆಯಲ್ಲಿ ಹೇಳಿದ್ದೇನೆ. ಸದರಿ ವಿಷಯ ನನ್ನ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನನಗೆ ಚನ್ನಾಗಿ ನೋಡಿಕೊಂಡಿದ್ದಾನೆ, ನನ್ನ ಯಲ್ಲಾ ಆಸ್ಪತ್ರೆ ಖರ್ಚನ್ನು ಬರಿಸಿದ್ದಾನೆ ಮತ್ತು ಆತನು ವಿವಾಹ ವಿಚ್ಛೆದನಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ನಾನು ದ್ವೇಷದಿಂದ ಈ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ಅತ್ತೆ-ಮಾವ ಮತ್ತು ನಾದನಿಯರು ಆರೋಪಿಗಳು ಇರುವುದಿಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.